(ಆ) ಹಾಗಿದ್ದಲ್ಲಿ, ಈ ಸಹಾಯ ಧನವನ್ನು ನಿಲ್ಲಿಸಲು ಕಾರಣಗಳೇನು ;

(ಇ) ಒಂಭತ್ತನೇ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು 2010–11ನೇ ಸಾಲಿನಲ್ಲಿ ರೈತರು ಖರೀದಿಸುವ ಟ್ರ್ಯಾಕ್ಟರ್ ಮತ್ತು ಟಿಲ್ಲರ್‌ಗೆ ಸಹಾಯಧನ ನೀಡುವುದಾಗಿ ಘೋಷಿಸಿರುವುದು ನಿಜವೇ ;

(ಈ) ಹಾಗಿದ್ದಲ್ಲಿ, ರೈತರು ಖರೀದಿಸುವ ಟ್ರ್ಯಾಕ್ಟರ್‌ಗಳಿಗೆ ಸಹಾಯಧನ ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು ;

(ಉ) ಕಳೆದ ಎರಡು ವರ್ಷಗಳಲ್ಲಿ ಸಹಾಯಧನ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು) ?

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು) :–

(ಅ) ಹೌದು

(ಆ) ಟ್ರ್ಯಾಕ್ಟರ್‌ಗಳಿಗೆ ಸಹಾಯಧನವನ್ನು ನೀಡಿದ್ದಲ್ಲಿ, ಆಯವ್ಯಯದ ಹೆಚ್ಚಿನ ಅನುದಾನವನ್ನು ಈ ಒಂದೇ ಘಟಕಕ್ಕೆ ವಿನಿಯೋಗಿಸಬೇಕಾಗುತ್ತದೆಯೋ ಹೊರತು ಇತರೇ ಕೃಷಿ ಯಂತ್ರೋಪಕರಣವನ್ನು ಸಹಾಯಧನದಲ್ಲಿ ವಿತರಿಸಲು ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕಾಗಿ ಟ್ರಾಕ್ಟರ್‌ಗಳಿಗೆ ಸಹಾಯಧನವನ್ನು ಸ್ಥಗಿತಗೊಳಿಸಲಾಗಿದೆ.

(ಇ) ಹೌದು

(ಈ) ಮೇಲೆ 'ಆ' ದಲ್ಲಿ ಉತ್ತರಿಸಿರುವಂತೆ

(ಉ) 2009–10ನೇ ಸಾಲಿನಲ್ಲಿ ಒಟ್ಟು 8888 ಟ್ರ್ಯಾಕ್ಟರ್‌ಗಳಿಗೆ ಅರ್ಜಿಗಳು ಬಂದಿದ್ದು, ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. 2010–11ನೇ ಸಾಲಿನಿಂದ ಟ್ರ್ಯಾಕ್ಟರ್‌ಗೆ ಸಹಾಯಧನ ಸ್ಥಗಿತಗೊಳಿಸಿರುವುದರಿಂದ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಜಲಾನಯನ ಇಲಾಖೆಯಿಂದ ಬಿಡುಗಡೆಯಾದ ಅನುದಾನ

ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) :–

254(461) ಮಾನ್ಯ ಕೃಷಿ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ಕಳೆದ ಮೂರು ವರ್ಷದಿಂದ ಈವರೆಗೆ ಬೀದರ್ ಜಿಲ್ಲೆಗೆ ಜಲಾನಯನ ಇಲಾಖೆಯಿಂದ ಬಿಡುಗಡೆಯಾದ ಅನುದಾನದ ಮೊತ್ತ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಅ) ಈ ಯೋಜನೆಯಿಂದ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. (ತಾಲ್ಲೂಕುವಾರು ವಿವರ ನೀಡುವುದು) ;

(ಇ) ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆಯೆ, ಹಾಗಿದ್ದಲ್ಲಿ, ಎಲ್ಲಾ ತಾಲ್ಲೂಕುಗಳಿಗೂ ಸಮಾನವಾಗಿ ಅನುದಾನವನ್ನು ಹಂಚಿಕೆ ಮಾಡಲಾಗಿದೆಯೇ (ವಿವರಗಳನ್ನು ನೀಡುವುದು)

(ಈ) ಹಾಗಿದ್ದಲ್ಲಿ, ಈವರೆವಿಗೂ ಪೂರ್ಣಗೊಂಡ ಮತ್ತು ಅಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು (ವಿವರಗಳನ್ನು ನೀಡುವುದು) ;

(ಉ) ಈ ಯೋಜನೆಗೆ ಬಿಡುಗಡೆಯಾದ ಅನುದಾನದಲ್ಲಿ ಖರ್ಚಾಗಿರುವ ಮತ್ತು ಬಾಕಿ ಉಳಿದಿರುವ ಮೊತ್ತ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

ಶ್ರೀ ಉಮೇಶ್ ಕತ್ತಿ (ಕೃಷಿ ಸಚಿವರು) :–

(ಅ) ಕಳೆದ ಮೂರು ವರ್ಷಗಳಿಂದ ಬೀದರ್ ಜಿಲ್ಲೆಗೆ ಒಟ್ಟು ರೂ. 2945.78 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

(ಆ) ಈ ಯೋಜನೆಯಿಂದ ತಡೆಆಣೆ, ಗುಂಡುಕಲ್ಲು ಬದುಗಳು, ಕ್ಷೇತ್ರಬದು. ಕೃಷಿಹೊಂಡ, ಕೆರೆ ಹೂಳೆತ್ತುವುದು. ನಾಲಾಬದು, ಕಿರು ಜಿನುಗುಕೆರೆ, ತಿರುವುಗಾಲುವೆ, ತೋಟಗಾರಿಕೆ ಮತ್ತು ಅರಣ್ಯ ಸಸಿಗಳನ್ನು ನೆಡುವುದು ಹಾಗೂ ಮುಂತಾದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

(ಇ) ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಎಲ್ಲಾ ತಾಲ್ಲೂಕುಗಳಿಗೆ ಅನುದಾನ ಸಮನಾಗಿ ಹಂಚಿಕೆಯಾಗಿರುವುದಿಲ್ಲ. ಏಕೆಂದರೆ ಯೋಜನೆ/ಜಲಾನಯನಗಳ ಸಂಖ್ಯೆಯಲ್ಲಿ ವ್ಯತ್ಯಾಸವಿರುವುದರಿಂದ ತಾಲ್ಲೂಕುವಾರು ಅನುದಾನದಲ್ಲಿ ವ್ಯತ್ಯಾಸವಿರುತ್ತದೆ.

(ಈ) ಕಳೆದ ಮೂರು ವರ್ಷಗಳಲ್ಲಿ ಕೈಗೆತ್ತಿಕೊಂಡ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಇತ್ತೀಚೆಗೆ ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮ (IWMP) ಯೋಜನೆಯಡಿ ಬಿಡುಗಡೆಯಾದ ಅನುದಾನದಲ್ಲಿ ರೂ. 473.786 ಲಕ್ಷಗಳು ಉಳಿದಿರುತ್ತವೆ. ಈ ಯೋಜನೆ ಅಡಿಯಲ್ಲಿ ಮುಂಬರುವ ದಿನಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಹಂತ ಹಂತವಾಗಿ ಖರ್ಚು ಮಾಡಲಾಗುವುದು.

(ಉ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಗೆ ಜಲಾನಯನ ಅಭಿವೃದ್ಧಿ ಯೋಜನೆಗಳಿಗೆ ಬಿಡುಗಡೆಯಾದ, ತೆಗೆದುಕೊಂಡ ಕಾಮಗಾರಿ ಖರ್ಚಾದ ಹಣ ಮತ್ತು ಉಳಿಕೆ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ತಾಲ್ಲೂಕು	ಬಿಡುಗಡೆ/ ಹಂಚಿಕೆಯಾದ ಅನುದಾನ	ತೆಗೆದುಕೊಂಡ ಕಾಮಗಾರಿಗಳ ವಿವರ	ಖರ್ಚಾದ ಹಣ	ಉಳಿಕೆಯಾದ ಅನುದಾನ (31 ಮಾರ್ಚ್–2011 ರಂತೆ)
1.	ಔರಾದ	612.38	ತಡೆಅಣೆ, ಕ್ಷೇತ್ರಬದು, ಕೃಷಿಹೊಂಡ, ಕೆರೆ	476.34	136.04
2.	ಬಾಲ್ಕಿ	546.32	ಹೂಳೆತ್ತುವುದು, ನಾಲಾಬದು, ಕಿರು ಜಿನುಗುಕೆರೆ	477.979	68.341
3.	ಬಸವಕಲ್ಯಾಣ	604.135	ತಿರುವುಗಾಲುವೆ, ತೋಟಗಾರಿಕೆ ಮತ್ತು ಅರಣ್ಯ	479.29	124.845
4.	ಹುಮನಾಬಾದ	602.97	ಸಸಿಗಳನ್ನು ನೆಡುವುದು ಮತ್ತು ಮುಂತಾದ	496.06	106.91
5.	ಬೀದರ್	579.97	ಕಾಮಗಾರಿಗಳು	542.32	37.65
	ಒಟ್ಟು	2945.775		2471.989	473.786

ರೂ. 473.786 ಲಕ್ಷಗಳು ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮ (ಐ.ಡಬ್ಲು.ಎಂ.ಪಿ.) ಹಂತ–1 ಮತ್ತು ಹಂತ–2 ಗೆ ಸಂಬಂಧಿಸಿದ್ದು, ಇದು ಮುಂದುವರೆದ ಯೋಜನೆಯಾಗಿರುವುದರಿಂದ ಈ ಅನುದಾನವನ್ನು ಮುಂಬರುವ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಹಂತ ಹಂತವಾಗಿ ಖರ್ಚು ಮಾಡಲಾಗುವುದು. ಇವೆರಡು ಪ್ರಾಜೆಕ್ಟ್‌ಗಳು 5 ವರ್ಷದ ಅವಧಿಯನ್ನು ಹೊಂದಿರುತ್ತವೆ.